RNU AIR DHARWAD

DECEMBER 24, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಗ್ರೀನ್ ಫೀಲ್ಡ್ ಕಾರಿಡಾರ್ ಯೋಜನೆ; ರಾಜ್ಯದಲ್ಲಿ ಕೈಗೆತ್ತಿಕೊಳ್ಳಲು, ಕೇಂದ್ರ ಸರ್ಕಾರದ ಸಮ್ಮತಿ.
- ಕಾಫಿ ಉದ್ಯಮ ಉತ್ತೇಜಿಸಲು, ರಾಜ್ಯದಲ್ಲಿ ತರಬೇತಿ ಕೇಂದ್ರ ಆರಂಭಿಸಲು, ಕೇಂದ್ರ ಸರ್ಕಾರದ ಚಿಂತನೆ.
- ಉತ್ತರಕನ್ನಡ ಜಿಲ್ಲೆಯ, ಅಘನಾಶಿನಿ ನದಿ ಅಳಿವೆಗೆ, 'ರಾಮ್‌ಸಾರ್ ಜೌಗುತಾಣ'ವೆಂಬ, ಜಾಗತಿಕ ಮನ್ನಣೆ.
- ಇಂದು 'ರಾಷ್ಟ್ರೀಯ ಗ್ರಾಹಕರ ದಿನಾಚರಣೆ; ಜಾಗೋ ಗ್ರಾಹಕ್ ಜಾಗೋ ಆಪ್, ಬಿಡುಗಡೆ.

<><><>

ಈಗ ವಾರ್ತೆಗಳ ವಿವರ

<><><>

4 ಸಾವಿರದ 500 ಕೋಟಿ ರೂಪಾಯಿ ವೆಚ್ಚದಲ್ಲಿ, ಗ್ರೀನ್ ಫೀಲ್ಡ್ ಕಾರಿಡಾರ್ ಯೋಜನೆಯನ್ನು, ರಾಜ್ಯದಲ್ಲಿ ಕೈಗೆತ್ತಿಕೊಳ್ಳಲು, ಕೇಂದ್ರ ಸರ್ಕಾರ ಸಮ್ಮತಿಸಿದೆ ಎಂದು, ಕೇಂದ್ರ ಜಲಶಕ್ತಿ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ತುಮಕೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಸಚಿವರು, ಹಾಸನ, ತಿಪಟೂರು, ಹುಳಿಯಾರು, ಹಿರಿಯೂರು ನಡುವೆ, ಗ್ರೀನ್ ಫೀಲ್ಡ್ ಕಾರಿಡಾರ್ ನಿರ್ಮಾಣವಾಗಲಿದೆ.

<><><>

ತುಮಕೂರು–ರಾಮದುರ್ಗ ರೈಲ್ವೆ ಮಾರ್ಗದ, 2 ಸಾವಿರದ 500 ಕೋಟಿ ರೂಪಾಯಿ ವೆಚ್ಚದಲ್ಲಿ, 2 ನೇ ಹಂತದ ಕಾಮಗಾರಿಗಳು ಆರಂಭವಾಗಿವೆ. 2027ರ ಡಿಸೆಂಬರ್ ಒಳಗೆ, ಈ ಯೋಜನೆ ಪೂರ್ಣಗೊಳ್ಳಲಿದೆ ಎಂದರು.

<><><>

ನೆಲಮಂಗಲ ದಿಂದ ತುಮಕೂರು ಹೊರ ವಲಯದ ಊರುಕೆರೆ ವರೆಗೆ, ಕಳೆದ ಮೂರು ವರ್ಷಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ 254 ಜನ ಸಾವನಪ್ಪಿದ್ದಾರೆ. ಹೆದ್ದಾರಿ ಅಗಲೀಕರಣಕ್ಕೆ ಕೇಂದ್ರ ಸಚಿವ ಗಡ್ಕರಿ ಅವರಿಗೆ, ಮನವಿ ಮಾಡುವುದಾಗಿ ಹೇಳಿದರು.

<><><>

ಕಾಫಿ ಬೆಳೆಗಾರರ ಕ್ಷೇಮಾಭಿವೃದ್ಧಿಗೆ, ಕೇಂದ್ರ ಬದ್ಧವಾಗಿದ್ದು, ಕಾಫಿ ಉದ್ಯಮಕ್ಕೆ ಉತ್ತೇಜನ ನೀಡಲು, ತರಬೇತಿ ಕೇಂದ್ರ ತೆರೆಯುವ ಚಿಂತನೆ ನಡೆದಿದೆ ಎಂದು, ಕೇಂದ್ರ ವಾಣಿಜ್ಯ ವ್ಯವಹಾರಗಳ ಖಾತೆ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಹಾಸನ ಜಿಲ್ಲೆ ಸಕಲೇಶಪುರದಲ್ಲಿ, ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳ ಕಾಫಿ ಕೃಷಿಕರ ಮೇಳವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಹತ್ತು ಸಾವಿರ ಕೋಟಿ ರೂಪಾಯಿ, ವಿದೇಶಿ ವಿನಿಮಯಕ್ಕೆ, ಭಾರತದ ಕಾಫಿ ಬೆಳೆಗಾರರು ಬೆನ್ನೆಲುಬಾಗಿದ್ದಾರೆ. ಯುವ ಉದ್ಯಮಿಗಳ ಕಾಫಿ ಸ್ಟಾರ್ಟ್ ಅಪ್‌ಗಳಿಗೆ ಉತ್ತೇಜನ ನೀಡಲಾಗುತ್ತಿದೆ ಎಂದರು.

<><><>

ಕಾಡಾನೆ ಹಾಗೂ ಮಾನವ ಸಂಘರ್ಷ ಪರಿಹಾರಕ್ಕೆ, ಕಾಫಿ ಬೋರ್ಡ್ ಮೂಲಕ ಡ್ರೋನ್ ಸಮೀಕ್ಷೆ ಕೈಗೊಳ್ಳಲಾಗುವುದು. ಬಳಿಕ ಉಪಗ್ರಹ ಸಮೀಕ್ಷೆ ನಡೆಸಿ, ಶಾಶ್ವತ ಪರಿಹಾರಕ್ಕೆ ಅರಣ್ಯ ಸಚಿವಾಲಯ ಕ್ರಮ ಕೈಗೊಳ್ಳಲಿದೆ ಎಂದರು.

<><><>

ಶಿವಮೊಗ್ಗ ಜಿಲ್ಲೆ, ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಪುನಃಶ್ಚೇತನಕ್ಕೆ, ಡಿ.ಪಿ.ಆರ್. ರಚಿಸಲು, ಸೂಚಿಸಿದ್ದಾಗಿ, ಕೇಂದ್ರದ ಉಕ್ಕು ಮತ್ತು ಭಾರಿ ಕೈಗಾರಿಕೆ ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಹಾಸನ ಜಿಲ್ಲೆ, ಹೊಳೆನರಸೀಪುರ ತಾಲೂಕಿನ, ಹರದನಹಳ್ಳಿ ಮಾವಿನಕೆರೆ ಶ್ರೀರಂಗನಾಥ ಸ್ವಾಮಿ ದೇವಾಲಯಕ್ಕೆ ಅವರು ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ನಾನಾ ಭಾಗಗಳಲ್ಲಿ 1 ಲಕ್ಷದ 30 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ವಿವಿಧ ಕಾರ್ಖಾನೆಗಳ ಪುನಃಶ್ಚೇತನಕ್ಕೆ, ಚಾಲನೆ ನೀಡುತ್ತಿರುವುದಾಗಿ, ಹೇಳಿದರು.

<><><>

ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ, ಬೆಳಗಾವಿಯಲ್ಲಿ ಜರುಗಿದ, ಕಾಂಗ್ರೆಸ್ ಮಹಾಧಿವೇಶನದ ಶತಮಾನೋತ್ಸವ ಸಂಭ್ರಮಾಚರಣೆ, 'ಗಾಂಧಿ ಭಾರತ' ಸಮಾವೇಶ ನಾಡಿದ್ದು, 26 ಹಾಗೂ 27 ರಂದು, ಬೆಳಗಾವಿಯಲ್ಲಿ ಎರಡು ದಿನಗಳ ಕಾಲ ನಡೆಯಲಿದೆ.

ಸಮಾರಂಭದ ಪೂರ್ವ ಸಿದ್ಧತೆಯನ್ನು, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ, ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ ಹಾಗೂ ಲಕ್ಷ್ಮೀ ಹೆಬ್ಬಾಳಕರ ಪರಿಶೀಲಿಸಿದರು. ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸುರ್ಜೇವಾಲಾ ಅವರು, ನಾಡಿದ್ದು 26 ರಂದು ಎ.ಐ.ಸಿ.ಸಿ. ಕಾರ್ಯಕಾರಣಿ ಸಭೆ ನಡೆಯಲಿದೆ. 27 ರಂದು ಸಾರ್ವಜನಿಕ ಸಮಾವೇಶ ಜರುಗಲಿದೆ. ಸುವರ್ಣ ವಿಧಾನಸೌಧದಲ್ಲಿ ಗಾಂಧಿ ಮೂರ್ತಿ ಅನಾವರಣ ಮಾಡಲಾಗುವುದು ಎಂದರು.

<><><>

ಬೀದರ್ ಜಿಲ್ಲೆ ಚಳಕಾಪುರದಲ್ಲಿ, ಶ್ರೀ ಆರೂಢ ಜ್ಯೋತಿ ಯಾತ್ರೆಗೆ ಚಾಲನೆ ದೊರೆತಿದೆ. ವಿವಿಧ ರಾಜ್ಯಗಳಲ್ಲಿ ಸಂಚರಿಸಿ, ಫೆಬ್ರವರಿ 18ರಂದು ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠಕ್ಕೆ ರಥ ಆಗಮಿಸಲಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೀದರ್ ಜಿಲ್ಲೆ ಚಳಕಾಪುರದ ಶ್ರೀ ಸಿದ್ಧಾರೂಢ ಮಠದ, ಶ್ರೀ ಚಿದಂಬರ ಆಶ್ರಮದ ಆಡಳಿತಾಧಿಕಾರಿ, ಡಾಕ್ಟರ್ ಹಾವಗಿರಾವ್ ಮೈಲಾರೆ.

<><><>

ಹಾವಗಿರಾವ್ ಮೈಲಾರೆ ಧ್ವನಿ 49 ಸೆಕೆಂದುಗಳು

<><><>

ಈಗ ಜಾಹಿರಾತು..

ನಂತರ ಪ್ರದೇಶ ಸಮಾಚಾರ, ಮುಂದುವರೆಯುವುದು..

(ದಿನದರ್ಶಿಕೆ 10 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಉತ್ತರಕನ್ನಡ ಜಿಲ್ಲೆ, ಶಿರಸಿಯ ಶಂಕರಹೊಂಡ ಮತ್ತು ಮಂಜಗುಣಿಯಲ್ಲಿ ಉಗಮವಾಗಿ, ಉಂಚಳ್ಳಿಯಲ್ಲಿ ಸುಂದರ ಜಲಪಾತವನ್ನು ಸೃಷ್ಟಿಸಿ, ಅಘನಾಶಿನಿ ನದಿ, ಅರಬ್ಬೀ ಸಮುದ್ರವನ್ನು ಸೇರುವ ಭಾಗದ ಅಳಿವೆಗೆ, ಈಗ 2024ರಲ್ಲಿ ರಾಮ್‌ಸಾರ್ ಜೌಗುತಾಣ ಎಂಬ ಜಾಗತಿಕ ಮನ್ನಣೆ ಲಭಿಸಿದೆ.

115 ಕಿಲೋ ಮೀಟರ್ ಉದ್ದದ, 4 ಸಾವಿರದ 800 ಹೆಕ್ಟರ್ ಪ್ರದೇಶ ವ್ಯಾಪ್ತಿ ಹೊಂದಿರುವ, ಅಘನಾಶಿನಿ ನದಿ ಅಳಿವೆಗೆ, ರಾಮ್‌ಸಾರ್ ತಾಣ ಎಂಬ ಮನ್ನಣೆ ದೊರಕಿದ ಹಿನ್ನೆಲೆ, ಖ್ಯಾತ ಪರಿಸರ ವಿಜ್ಞಾನಿ, ಉತ್ತರಕನ್ನಡ ಜಿಲ್ಲೆ ಶಿರಸಿ ತಾಲೂಕು ಬಕ್ಕೇಮನೆಯ, ನಾಗೇಶ ಹೆಗಡೆ ಅವರು, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ನಾಗೇಶ ಹೆಗಡೆ ಧ್ವನಿ 42 ಸೆಕೆಂದುಗಳು

<><><>

ಇಂದು 'ರಾಷ್ಟ್ರೀಯ ಗ್ರಾಹಕರ ದಿನಾಚರಣೆ. ಗ್ರಾಹಕರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಮೀಸಲಾದ ದಿನ. ಗ್ರಾಹಕ ನ್ಯಾಯಕ್ಕಾಗಿ 'ಡಿಜಿಟಲ್ ಆ್ಯಕ್ಸೆಸ್ ಹಾಗೂ ವರ್ಚುವಲ್ ಹಿಯರಿಂಗ್ಸ್' ಧ್ಯೇಯದೊಂದಿಗೆ, ಇಂದು ಹೊಸ ದಿಲ್ಲಿಯಲ್ಲಿ, ಕೃತಕ ಬುದ್ಧಿಮತ್ತೆ ಆಧರಿಸಿದ, ರಾಷ್ಟ್ರೀಯ ಗ್ರಾಹಕರ ಸಹಾಯವಾಣಿಗೆ, ಚಾಲನೆ ಸಿಗಲಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಅವರು, 'ಜಾಗೋ ಗ್ರಾಹಕ್ ಜಾಗೋ' ಆ್ಯಪ್, 'ಜಾಗೃತಿ' ಆ್ಯಪ್ ಹಾಗೂ 'ಜಾಗೃತಿ ಡ್ಯಾಶ್‌ಬೋರ್ಡ್' ಜೊತೆಗೆ, 'ಇ–ಮ್ಯಾಪ್' ಲೋಕಾರ್ಪಣೆಗೊಳಿಸಲಿದ್ದಾರೆ. 13 ಪ್ರಮುಖ ಇ–ಕಾಮರ್ಸ್ ಕಂಪೆನಿಗಳು, ಗ್ರಾಹಕರ ಸುರಕ್ಷಾ ಪ್ರತಿಜ್ಞೆಗೆ ಸಹಿ ಹಾಕಲಿವೆ.

<><><>

ಧಾರವಾಡದ ಖ್ಯಾತ ಜಿಮ್ನಾಸ್ಟಿಕ್ ಪಟು, ಅನು ಅಶೋಕ ಮುತ್ತಗಿ, 7 ಬಾರಿ ರಾಷ್ಟ್ರ ಮಟ್ಟದಲ್ಲಿ, ರಾಜ್ಯವನ್ನು ಪ್ರತಿನಿಧಿಸಿ, ವಿವಿಧ ಪದಕಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಪ್ರಸ್ತುತ, ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ, ಇಂಜಿನೀಯರಿಂಗ್ ವಿದ್ಯಾರ್ಥಿಯಾಗಿರುವ ಅನು ಅವರು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಅನು ಮುತ್ತಗಿ ಧ್ವನಿ 45 ಸೆಕೆಂದುಗಳು

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಸಾಯಿ ನಗರದ ಅಚ್ಚವ್ವನ ಕಾಲೊನಿ, ಈಶ್ವರ ದೇವಸ್ಥಾನ ಕಟ್ಟಡದಲ್ಲಿ, ಅಡುಗೆ ಅನಿಲ ಸೋರಿಕೆಯಾಗಿ, 9 ಜನ ಅಯ್ಯಪ್ಪ ಮಾಲಾಧಾರಿಗಳು ತೀವ್ರ ಗಾಯಗೊಂಡಿದ್ದಾರೆ. ಗಾಯಾಳು ಮಾಲಾಧಾರಿಗಳನ್ನು ಕೆ.ಎಂ.ಸಿ. – ಆರ್.ಐ.ಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. 12 ವರ್ಷದ ಬಾಲಕ ಸೇರಿ, ಎಲ್ಲರ ದೇಹಗಳು ಶೇಕಡ 70ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಸುಟ್ಟಿದ್ದು, ಜೀವನ್ಮರಣದ ಮಧ್ಯೆ ಹೋರಾಡುತ್ತಿದ್ದಾರೆ.

‘9 ಜನರ ಪೈಕಿ, 8 ಜನರ ಸ್ಥಿತಿ ತೀವ್ರ ಚಿಂತಾಜನಕವಾಗಿದೆ. ವೈದ್ಯರ ವಿಶೇಷ ತಂಡ ರಚಿಸಲಾಗಿದ್ದು, ಉನ್ನತ ಮಟ್ಟದ ಚಿಕಿತ್ಸೆ ನೀಡಲು, ಕೆ.ಎಂ.ಸಿ.– ಆರ್.ಐ. ನಿರ್ದೇಶಕರಿಗೆ ಸೂಚಿಸಲಾಗಿದೆ’ ಎಂದು, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಧಾರವಾಡದ ಖ್ಯಾತ ಸಾಹಿತಿ, ಡಾಕ್ಟರ್ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ, ‘ನೀ,ನಾ–60’ ಸಂಭ್ರಮ ಸೇರಿದಂತೆ, ನಾಲ್ಕು ಕೃತಿಗಳ ಬಿಡುಗಡೆ ಸಮಾರಂಭ, ಧಾರವಾಡ ರಂಗಾಯಣದ ಸಾಂಸ್ಕೃತಿಕ ಸಮುಚ್ಛಯ ಭವನದಲ್ಲಿ, ನಾಳೆ ಬೆಳಗ್ಗೆ 10.30ಕ್ಕೆ, ಜರುಗಲಿದೆ. ಹಿರಿಯ ಪತ್ರಕರ್ತ ರಘುನಾಥ ಚ.ಹ., ಕೃತಿಗಳನ್ನು ಲೋಕಾರ್ಪಣೆಗೊಳಿಸಲಿದ್ದು, ಪುಸ್ತಕಗಳ ಕುರಿತು ದೇವು ಪತ್ತಾರ ಹಾಗೂ ರೂಪಾ ಜೋಶಿ ಅವರು, ಮಾತನಾಡಲಿದ್ದಾರೆ ಎಂದು, ಅನನ್ಯ ಪ್ರಕಾಶನದ ಹೇಮಾ ಪಟ್ಟಣಶೆಟ್ಟಿ ತಿಳಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಶಿವಮೊಗ್ಗದ, ತ್ಯಾವರೆಕೊಪ್ಪ ಹುಲಿ–ಸಿಂಹಧಾಮ, ಇಂದು ವೀಕ್ಷಣೆಗೆ ತೆರೆದಿರಲಿದೆ.

<><><>

ದಕ್ಷಿಣಕನ್ನಡ ಜಿಲ್ಲೆಯ, ಪಿಲಿಕುಳ ಮೃಗಾಲಯದಲ್ಲಿ, 14 ವರ್ಷದ ಹುಲಿ ರಾಣಿ ಎರಡು ಮರಿಗಳಿಗೆ ಜನ್ಮ ನೀಡಿದೆ.

<><><>

2025ರ ಜನವರಿ 26 ರಂದು, ಹೊಸದಿಲ್ಲಿಯ ಕರ್ತವ್ಯ ಪಥದ ಗಣರಾಜ್ಯೋತ್ಸವ ಕವಾಯತಿನಲ್ಲಿ, ಗದಗ ಜಿಲ್ಲೆ, ಐತಿಹಾಸಿಕ ಲಕ್ಕುಂಡಿಯ, ಬ್ರಹ್ಮ ಜಿನಾಲಯದ ಸ್ತಬ್ಧಚಿತ್ರ ರಾಜ್ಯವನ್ನು ಪ್ರತಿನಿಧಿಸಲು, ಆಯ್ಕೆಯಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಗ್ರೀನ್ ಫೀಲ್ಡ್ ಕಾರಿಡಾರ್ ಯೋಜನೆ; ರಾಜ್ಯದಲ್ಲಿ ಕೈಗೆತ್ತಿಕೊಳ್ಳಲು, ಕೇಂದ್ರ ಸರ್ಕಾರದ ಸಮ್ಮತಿ.

- ಕಾಫಿ ಉದ್ಯಮ ಉತ್ತೇಜಿಸಲು, ರಾಜ್ಯದಲ್ಲಿ ತರಬೇತಿ ಕೇಂದ್ರ ಆರಂಭಿಸಲು, ಕೇಂದ್ರ ಸರ್ಕಾರದ ಚಿಂತನೆ.

- ಉತ್ತರಕನ್ನಡ ಜಿಲ್ಲೆಯ, ಅಘನಾಶಿನಿ ನದಿ ಅಳಿವೆಗೆ, ‘ರಾಮ್‌ಸಾರ್ ಜೌಗುತಾಣ’ವೆಂಬ, ಜಾಗತಿಕ ಮನ್ನಣೆ.

- ಇಂದು ‘ರಾಷ್ಟ್ರೀಯ ಗ್ರಾಹಕರ ದಿನಾಚರಣೆ; ಜಾಗೋ ಗ್ರಾಹಕ್ ಜಾಗೋ ಆಪ್, ಬಿಡುಗಡೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ